
**ಪತಿ:** ಮನೆಯಲ್ಲಿ ಯಾವುದೇ ಸ್ಫೋಟಕ ವಸ್ತುಗಳನ್ನು ಇಟ್ಟುಕೊಳ್ಳುವುದು ಅಪರಾಧ ಎಂದು ಕಾನೂನು ಹೇಳುತ್ತದೆ.
**ಪತ್ನಿ:** ಹೌದ್ರಿ, ನಿನ್ನೆ ಪ್ರಚಾರ ಮಾಡುತ್ತಿದ್ದರು.
**ಪತಿ:** (ಪತ್ನಿಯತ್ತ ನೋಡುತ್ತ) ಅದಕ್ಕೆ?
**ಪತ್ನಿ:** ನನ್ಯಾಕ ಹಾಂಗ್ಗ ನೋಡತ್ತೀರಿ?
**ಪತಿ:** ಏನಿಲ್ಲ ಬಿಡವ್ವ.

ಪ್ರೇಮಿಸಿ ಮದುವೆಯಾದ ಗಂಡ ಹೆಂಡತಿಯ ಮಾತಿದು.
**ಹೆಂಡತಿ:** ಅಲ್ರಿ ಒಂದ್ ಮಾತು ಕೇಳ್ಲಾ?
**ಗಂಡ:** ಕೇಳು.
**ಹೆಂಡತಿ:** ಮದುವೆ ಮುಂಚೆ ನಿನ್ನ ಹುಚ್ಚನಂತೆ ಪ್ರೀತಿಸ್ತೀನಿ ಅಂತಿದ್ರಿ.
**ಗಂಡ:** ಹೌದು.
**ಹೆಂಡತಿ:** ಈಗ್ಯಾಕೆ ಹೇಳುತ್ತಿಲ್ಲ.
**ಗಂಡ:** ಈಗ ಹುಚ್ಚು ವಾಸಿ ಆಗೇದ...


ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದಿದ್ದ ಗುಂಡ ಹಾಳುಬಾವಿ ಮುಂದೆ ನಿಂತು ಒಂದು, ಎರಡು, ಮೂರು... ಮೂರು ಎಂದು ಬೆರಳು ಮಾಡಿ ಹೇಳುತ್ತಿದ್ದ. ದಾರಿಹೋಕನೊಬ್ಬ ಅದನ್ನು ನೋಡಿ, 'ಓಹೋ ಮುಂದೆ ಎಣಿಸಲು ಬರುತ್ತಿಲ್ಲ' ಎಂದು ಮೂರಾದ ಮೇಲೆ ಹೇಳಿಕೊಡಬೇಕೆ ಎಂದು ಕೇಳುತ್ತಾ ಅವನ ಬಳಿಗೆ ಹೋದ. ತಕ್ಷಣ ಹುಚ್ಚ ದಾರಿಹೋಕನನ್ನು ಬಾವಿಗೆ ತಳ್ಳಿ, ನಾಲ್ಕು ನಾಲ್ಕು ಎಂದ.




ಇವತ್ತು ಮೂವರು ಬಲೆಗೆ ಬಿದ್ದಿದ್ದಾರೆ. ಸ್ವಲ್ಪ ದೂರ ಎಳಕೊಂಡು ಹೋಗಿ ಮತ್ತೆ ನೀರಿಗೆ ಬಿಡ್ತೀವಿ.

**ಪತಿ:** ಯಾಕೆ ಬೆಳ್ಳಂಬೆಳಿಗ್ಗೆ ಅಲಂಕಾರ ಮಾಡಿಕೊಳ್ತಿದ್ದಿ?
**ಪತಿ:** ಮೊಬೈಲ್ ಲಾಕ್ ಓಪನ್ ಆಗ್ತಾ ಇಲ್ಲ, ಆದಕ್ಕೆ.

**ಬಸವ:** ಮಾಸ್ತರ್ ತಲೆ ತಿರುಗಿ ಬಿದ್ರು.
**ಈಶ್ವರ:** ಯಾಕೆ.
**ಬಸವ:** ಹಾಜರಿ ತಗೋತಿದ್ರು. ಒಂದು ಹುಡುಗಿ, 'ಆಯಾಮ್ ಪ್ರಸೆಂಟ್ ಸರ್' ಅನ್ನುವ ಬದಲು, 'ಆಯಾಮ್ ಪ್ರಗ್ನೆಂಟ್ ಸರ್' ಅಂದುಬಿಟ್ಲು ಅದಕ್ಕ.




**ಗಂಡ:** ಇಷ್ಟೊತ್ತು ಎಲ್ಲಿಗೆ ಹೋಗಿದ್ದೆ?
**ಹೆಂಡತಿ:** ಶಾಪಿಂಗ್ ಮಾಡಲು ಮಾಲ್‌ಗೆ ಹೋಗಿದ್ದೆ.
**ಗಂಡ:** ನಾಲ್ಕಾರು ತಾಸಿಂದ ಏನೇನು ತಗೊಂಡೆ?
**ಹೆಂಡತಿ:** ಒಂದು ಹೇರ್‌ಕ್ಲಿಪ್, 50 ಸೆಲ್ಫಿ ಫೋಟೊಗಳು...




ಮೇಲಿಂದ ಏನೋ ಕೆಳಕ್ಕೆ ಬಿದ್ದಂಗಾಯ್ತೇ, ಅದೇನು ಅಂತ ಹುಡುಕ್ತಿದ್ದೀನಿ. ನೀ ಮಲಕೋ...

**ಡಾಕ್ಟರ್:** ನಿಮ್ಮದೇನು ಸಮಸ್ಯೆ?
**ರೋಗಿ:** ಡಾಕ್ಟರ್ ಬೈಕ್ ಮೇಲಿಂದ ಬಿದ್ದು ಮೊಣಕಾಲಿಗೆ ಪೆಟ್ಟು ಬಿದ್ದಿದೆ.
**ಡಾಕ್ಟರ್:** ತಗೊಳ್ಳಿ ಪೆಟ್ಟು ಬಿದ್ದ ಜಾಗಕ್ಕೆ ಈ ಮುಲಾಮು ದಿನಕ್ಕೆ ಎರಡು ಬಾರಿ ಹಚ್ಚಿ, ನೋವು ಕಡಿಮೆ ಆಗುತ್ತೆ.
**ರೋಗಿ:** ಅದು ಸಾಧ್ಯವಿಲ್ಲ ಡಾಕ್ಟರೆ.
**ಡಾಕ್ಟರ್:** ಯಾಕೆ?
**ರೋಗಿ:** ನಾನು ಬಿದ್ದ ಜಾಗ ಇಲ್ಲಿಂದ ನೂರು ಕಿ.ಮೀ. ಇದೆ.
**ಡಾಕ್ಟರ್:** ಹೌದಾ? ಒಂದ್ ಕೆಲ್ಸ ಮಾಡಿ, ಸೀದಾ ಹುಚ್ಚಾಸ್ಪತ್ರೆಗೆ ಹೋಗಿ.

ದಾಡಿ ಬಿಟ್ಟಿದ್ದ ಒಬ್ಬಾತ ರೈಲಿನಲ್ಲಿ ಪ್ರಯಾಣಿಸುತ್ತಿದ್ದ. ಆತ ಇನ್ನೊಬ್ಬನಿಗೆ 'ನೋಡಪ್ಪಾ... ಬೆಂಗಳೂರು ಬಂದ ಕೂಡಲೇ ಎಬ್ಬಿಸು' ಎಂದು ಕೇಳಿಕೊಂಡ. ನೋಡಲು ಸಲೂನ್‌ನಲ್ಲಿ ಕೆಲಸ ಮಾಡುವವನಂತಿದ್ದ ಆತ, ಒಪ್ಪಿಕೊಂಡ. ದಾಡಿ ಆಸಾಮಿ ಚೆನ್ನಾಗಿ ಮಲಗಿ ಗೊರಕೆ ಹೊಡೆಯುತ್ತಿದ್ದ. ಸಾಮಗ್ರಿ ಸಮೇತ ಬಂದಿದ್ದ ಸಲೂನ್‌ನಲ್ಲಿ ಕೆಲಸ ಮಾಡುವವ ಸುಮ್ಮನಿರದೆ, ಮಲಗಿದವನ ದಾಡಿ ಬೋಳಿಸಿಯೇ ಬಿಟ್ಟ. ಬೆಂಗಳೂರು ಬಂತೆಂದು ಎಬ್ಬಿಸಿದ. ಗಡಬಡಿಸಿ ಎದ್ದ ದಾಡಿ ಬಿಟ್ಟವ ಮುಖ ತೊಳೆಯಲು ವಾಶ್‌ಬೇಸಿನ್‌ನಲ್ಲಿ ಮುಖ ನೋಡಿಕೊಂಡ. ಮುಖ ಸ್ವಚ್ಛವಾಗಿದ್ದನ್ನು ಕಂಡು, 'ಅಲಾ ಇವನಾ ನನ್ನ ಎಬ್ಬಿಸು ಎಂದರೆ, ಬೇರೆ ಯಾರನ್ನೋ ಎಬ್ಬಿಸಿದ್ದಾನೆ' ಎಂದು ಅಂದುಕೊಂಡು ಪುನಃ ಹೋಗಿ ಮಲಗಿದ.

ಸಂಗ್ರಹ: ಸಿ.ಕೆ. ಗಣಪ್ಪನವರ, ಮುಂಡರಗಿ